**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालयः**

श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.


ಸಂಖ್ಯೆ: ಕಸಂವಿ/ಪರೀಕ್ಷಾಂಗ/ದ್ವಾ.ತ್ರ.ದೀ.ಘ/2025–26 ದಿನಾಂಕ: **09.01.2026**

## ಅಧಿಸೂಚನೆ

ವಿಷಯ: 2026ರಲ್ಲಿ ನಡೆಯಲಿರುವ ದ್ವಾದಶ-ತ್ರಯೋದಶ ದೀಕ್ಷಾಂತ ಘಟಿಕೋತ್ಸವದಲ್ಲಿ ಪದವಿ ಪ್ರಮಾಣಪತ್ರ ಪಡೆಯಲು ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ:ಮಾನ್ಯ ಕುಲಪತಿಗಳ ಅನುಮೋದನೆ ಕಂಡಿಕೆ ಸಂಖ್ಯೆ: 04 ; ದಿನಾಂಕ: 02.01.2026

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2023–24ನೇ ಸಾಲಿನ ದ್ವಾದಶ ಹಾಗೂ 2024–25ನೆಯ ಸಾಲಿನ ತ್ರಯೋದಶ ದೀಕ್ಷಾಂತ ಘಟಿಕೋತ್ಸವಗಳನ್ನು ಜಂಟಿಯಾಗಿ ನಡೆಸಲು ಅಗತ್ಯ ಸಿದ್ಧತೆಗಳನ್ನು ನಡೆಸುತ್ತಿದ್ದು, ಪದವಿ ಪ್ರಮಾಣಪತ್ರಗಳನ್ನು ಪಡೆಯಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

### ಶುಲ್ಕದ ವಿವರಗಳು

| ಕ್ರ.ಸಂ. | ತರಗತಿಗಳ ವಿವರಗಳು | ಶುಲ್ಕ |
|---|---|---|
| 1. | 2023–24 ಮತ್ತು 2024–25ನೇ ಸಾಲಿನ ಬಿ.ಎ./ಎಂ.ಎ./ಎಂ.ಎಸ್.ಸಿ ತರಗತಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕ | 1000.00 |
| 2. | 2023–24ನೇ ಸಾಲಿನಿಂದ ಪೂರ್ವದಲ್ಲಿ ಬಿ.ಎ./ಎಂ.ಎ./ ಎಂ.ಎಸ್.ಸಿ ತರಗತಿಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಪಾವತಿಸಬೇಕಾದ ಶುಲ್ಕ | 1100.00 |
| 3. | ಪಿಎಚ್.ಡಿ./ಡಿ.ಲಿಟ್ ಪದವಿ ಪ್ರಮಾಣಪತ್ರಗಳಿಗೆ ಪಾವತಿಸಬೇಕಾದ ಶುಲ್ಕ | 2500.00 |
| 4. | ದಂಡ ಶುಲ್ಕ | 100.00 |
| ಶುಲ್ಕ ಪಾವತಿಸಲು ಅಂತಿಮ ದಿನಾಂಕ (ದಂಡ ಶುಲ್ಕ ರಹಿತ) | | 30.01.2026 |
| ದಂಡ ಶುಲ್ಕ ಸಹಿತ ಪಾವತಿಸಲು ಅಂತಿಮ ದಿನಾಂಕ | | 03.02.2026 |
| ಕಾಲೇಜುಗಳಿಂದ ವಿಶ್ವವಿದ್ಯಾಲಯಕ್ಕೆ ಅರ್ಜಿಗಳನ್ನು ಸಲ್ಲಿಸಲು ಅಂತಿಮ ದಿನಾಂಕ | | 10.02.2026 |

- ಅರ್ಜಿಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಲತಾಣದಿಂದ http://ksu.ac.in ಡೌನ್ಲೋಡ್ ಮಾಡಬಹುದು ಅಥವಾ ಕರ್ನಾಟಕ ಸಂಸ್ಕೃತ ವಿಶ್ವವವಿದ್ಯಾಲಯದ ಪರೀಕ್ಷಾಂಗದಿಂದ ಭೌತಿಕ ಪ್ರತಿಯನ್ನು ಪಡೆಯಬಹುದು.
- ಅರ್ಜಿಯನ್ನು ಸಲ್ಲಿಸುವ ಅರ್ಹ ವಿದ್ಯಾರ್ಥಿಗಳು ತಮ್ಮ ಹೆಸರು ಮತ್ತು ತಂದೆಯ ಹೆಸರನ್ನು ಸಂಸ್ಕೃತ ಮತ್ತು ಆಂಗ್ಲ ಎರಡೂ ಭಾಷೆಯಲ್ಲಿ ಕಡ್ಡಾಯವಾಗಿ ನಮೂದಿಸಬೇಕು ಹಾಗೂ ಪೂರ್ಣ ವಿವರಗಳನ್ನು ತುಂಬಿರಬೇಕು.
- ಮಾನ್ಯತೆಗೊಳಪಟ್ಟ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳು ಅರ್ಜಿಯನ್ನು ತುಂಬಿ ನಿಗದಿತ ದಿನಾಂಕದೊಳಗೆ ಪ್ರಾಚಾರ್ಯರಿಗೆ ಸಲ್ಲಿಸುವುದು.
- ಕ.ಸಂ.ವಿ. ಪರಿಸರದ ವಿದ್ಯಾರ್ಥಿಗಳು ಅರ್ಜಿಗಳನ್ನು ಸಂಬಂಧಪಟ್ಟ ವಿಭಾಗಾಧ್ಯಕ್ಷರಿಂದ ದೃಢೀಕರಿಸಿ ಹಾಗೂ ಪಿಎಚ್.ಡಿ./ಡಿ.ಲಿಟ್ ವಿದ್ಯಾರ್ಥಿಗಳು ಅರ್ಜಿಗಳನ್ನು ಅಧ್ಯಯನಾಂಗದ ನಿರ್ದೇಶಕರಿಂದ ದೃಢೀಕರಿಸಿ ಅಧ್ಯಯನಾಂಗಕ್ಕೆ ಸಲ್ಲಿಸುವುದು.

9/1/26

- ಘಟಿಕೋತ್ಸವ ಪದವಿ ಪ್ರಮಾಣಪತ್ರಗಳ ಅರ್ಜಿಗಳನ್ನು ಸ್ವೀಕರಿಸಿದ ಮಾನ್ಯತೆಗೊಳಪಟ್ಟ ಮಹಾವಿದ್ಯಾಲಯಗಳ ಪ್ರಾಚಾರ್ಯರು ಹಾಗೂ ಅಧ್ಯಯನಾಂಗವು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಲತಾಣದಿಂದ ನಿಗದಿತ XL sheet ಡೌನ್ಲೋಡ್ ಮಾಡಿ ವಿದ್ಯಾರ್ಥಿಗಳ ಮಾಹಿತಿಯನ್ನು ತುಂಬಿ Soft Copyಯನ್ನು ಪರೀಕ್ಷಾಂಗದ ಮಿಂಚಂಚೆ (ಇ-ಮೇಲ್): examksu2016@gmai.comಗೆ ಕಳುಹಿಸುವುದು. Hard Copyಯನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರೀಕ್ಷಾಂಗಕ್ಕೆ ಸಲ್ಲಿಸುವುದು.(Fonts: For Samskrita – Sanskrit 2003(Unicode Font); For English – Times New Roman; Size 12)
- ಘಟಿಕೋತ್ಸವ ನಡೆಯಲಿರುವ ದಿನಾಂಕವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವುದು.
- ಶುಲ್ಕವನ್ನು SBI Payment Gateway ಮೂಲಕ ಪಾವತಿಸುವುದು. ksu.ac.in – Online fee Payment – Educational Institutions – Category – KARNATAKA SANSKRITH VISHWAVIDYALAYA – Karnataka – Payment Category – Exam section fee – BA/MA/MPhil/PhD Convaocation Certificate
- MSc ವಿದ್ಯಾರ್ಥಿಗಳು ಹಾಗೂ D Litt ಸಂಶೋಧಕರು ಮೇಲೆ ತಿಳಿಸಿದ ವಿಧಾನದದಲ್ಲಿಯೇ ಶುಲ್ಕ ಪಾವತಿಸುವುದು.
- ಶುಲ್ಕ ವಿನಾಯಿತಿಗೆ ಅರ್ಹರಾಗಿರುವ ವಿದ್ಯಾರ್ಥಿಗಳು ಪ್ರಸ್ತುತ ಪೂರ್ಣ ಶುಲ್ಕವನ್ನು ತುಂಬಿ ಸಂಬಂಧಪಟ್ಟ ಇಲಾಖೆಗೆ ಶುಲ್ಕ ತುಂಬಿದ ಹಾಗೂ ಇತರ ಅಗತ್ಯ ಮಾಹಿತಿ ನೀಡಿ ನಿಯಮಾನುಸಾರವಾಗಿ ಶುಲ್ಕ ಹಿಂಪಡೆಯಲು ಆವೇದಿಸಬಹುದು.
- ಕ.ಸಂ.ವಿ. ಅಧ್ಯಯನಾಂಗದ ನಿರ್ದೇಶಕರಿಂದ/ವಿಭಾಗಾಧ್ಯಕ್ಷರಿಂದ ಅಥವಾ ಸಂಬಂಧಪಟ್ಟ ಕಾಲೇಜಿನ ಪ್ರಾಚಾರ್ಯರಿಂದ ದೃಢೀಕರಿಸದ ಮತ್ತು ಅಗತ್ಯವಾದ ದಾಖಲೆಗಳನ್ನು ಲಗತ್ತಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು:

| Non UUCMS BA Students | UUCMS BA Students | Non UUCMS & UUCMS MA/MSc Students | Ph.D./D.Litt Scholors |
|---|---|---|---|
| Filled Application form | Filled Application form | Filled Application form | Filled Application form |
| Copy of SSLC/Sahitya Marks card | Copy of SSLC/Sahitya Marks card | Copy of SSLC/Sahitya Marks card | Copy of SSLC/Sahitya Marks card |
| BA I, II & III year Marks Cards copy or Result Sheet copy | BA Six Semesters Marks Cards copy or Result Sheet copy | MA/MSc Four Semesters Marks Cards copy or Result Sheet copy | Ph.D./D.Litt Declaration Notification |
| Pass port size Photo in Application | Passport size Photo in Application | Passport size Photo in Application | Passport size Photo (1 in Application & 1 extra) |
| Fees Payment Challan | Fees Payment Challan | Fees Payment Challan | Fees Payment Challan |

ಕುಲಸಚಿವರು(ಮೌಲ್ಯಮಾಪನ)-ಪ್ರ
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು

Registrar (Evaluation)
Karnataka Samskrita Vishwavidyalaya
Bengaluru - 560 018.

ಇವರಿಗೆ,

1. ನಿರ್ದೇಶಕರು, ಅಧ್ಯಯನಾಂಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
2. ವಿಭಾಗಾಧ್ಯಕ್ಷರುಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ (ಪರಿಸರ), ಬೆಂಗಳೂರು.
3. ಪ್ರಾಚಾರ್ಯರು, ಸರ್ಕಾರಿ & ಕ.ಸಂ.ವಿ. ಅಧೀನ ಮಹಾವಿದ್ಯಾಲಯಗಳು.

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
2. ಮಾನ್ಯ ಕುಲಸಚಿವರ ಆಪ್ತಶಾಖೆ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
3. ಹಣಕಾಸು ವಿಭಾಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು.
4. ನೋಡಲ್ ಅಧಿಕಾರಿಗಳು, ಇ-ಆಡಳಿತ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು -ಜಾಲತಾಣದಲ್ಲಿ ಪ್ರಕಟಿಸಲು
5. ಕಛೇರಿ ಪ್ರತಿ.